ಸಿ.ಡಬ್ಲೂ.-2/ ಪಿ.ಡಬ್ಲೂ-2

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

# ಸಿ.ಸಿ.ನಂ.186 /2024

| | | |
|---|---|---|
| ಸಾಕ್ಷಿದಾರರ ಹೆಸರು | : | ಕುನ್ನೇಗೌಡ |
| ತಂದೆಯ ಹೆಸರು | : | ಮರಸಿದ್ದೇಗೌಡ |
| ವಯಸ್ಸು | : | 70 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಜಿ ಬಿ ಸರಗೂರು |

**ಸಾಕ್ಷಿಯನ್ನು ದಿನಾಂಕಃ 17.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಚಾಸಾ-1 ನನ್ನ ಮಗ, ಚಾಸಾ 3 ನನ್ನ ಜಮೀನಿನ ಕೆಲಸ ಮಾಡುವವರು , ಚಾಸಾ 4 ನನ್ನ ಸೊಸೆ. ಆರೋಪಿತರ ಪರಿಚಯ ಇದೆ. ಕಳೆದ ಸುಮಾರು 1 ½ ವರ್ಷದ ಹಿಂದೆ ಆರೋಪಿಗಳು ನನ್ನ ಸೊಸೆಯಾದ ಚಾಸಾ 4 ರವರಿಗೆ ಸೇರಿದ ಜಮೀನಿನ ಬಳಿ ಬಂದು ಜಮೀನಿನ ಸುತ್ತ ಹಾಕಿದ್ದ ತಂತಿ ಬೇಲಿ ಹಾಗೂ ಕಲ್ಲು ಕಂಬ ಮುರಿಯುತ್ತಿದ್ದು ಈ ಬಗ್ಗೆ ನಾನು ಹಾಗೂ ನನ್ನ ಕೆಲಸದ ಆಳಾದ ಚಾಸಾ 3 ರವರು ಹೋಗಿ ಆರೋಪಿಗಳನ್ನು ವಿಚಾರಿಸಿದಾಗ ಅವರು ನಮ್ಮೊಂದಿಗೆ ಗಲಾಟೆ ಮಾಡಿ ಬೋಳಿ ಮಕ್ಕಳೇ, ಸೂಳೆ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಸದರಿ ವಿಚಾರವನ್ನು ನನ್ನ ಮಗನಾದ ಚಾಸಾ 1 ರವರಿಗೆ ಕರೆ ಮಾಡಿ ತಿಳಿಸಿರುತ್ತೇನೆ. ಆರೋಪಿಗಳು ಆ ರೀತಿ ಕಲ್ಲು ಕಂಬ ಹಾಗೂ ತಂತಿ ಬೇಲಿ ಮುರಿದುದ್ದರಿಂದ ಸುಮಾರು 10 ಸಾವಿರ ನಷ್ಟ ಆಗಿರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2 ಮತ್ತು 4 ನೇ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ. 1, 3 ಹಾಗೂ 5 ನೇ ಆರೋಪಿಗಳು ಗೈರು ಹಾಜರಾಗಿದ್ದು ಅವರ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿದ್ದು 1, 3 ಹಾಗೂ 5 ನೇ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

*(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಸದರಿ ಜಮೀನು ಎಮ್ ಕನ್ನೇನಹಳ್ಳಿ ಗ್ರಾಮದ ಸರ್ವೆ ನಂ. 36 ರಲ್ಲಿ 4 ಎಕರೆ ಇರುತ್ತದೆ ಎಂದರೆ ಸರಿ. ಚಾಸಾ 1 ರವರು ಪೋಲಿಸರಿಗೆ ದೂರನ್ನು ನೀಡಿದ ನಂತರ ದಿನಾಂಕ 04.04.2024 ರಂದು ತನಿಖಾಧಿಕಾರಿಗಳ ಮುಂದೆ ಈ ಎಲ್ಲ ಸಂಗತಿಗಳ ಬಗ್ಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಕೆ ಎಸ್ ಎಮ್ ವಕೀಲರಿಂದ**

ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳದ ಜಮೀನು ನನ್ನ ಸೊಸೆಯಾದ ಚಾಸಾ 4 ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸರ್ವೆ ನಂ.36 ಹಾಗೂ 37 ರ ಜಮೀನನ್ನು ನನ್ನ ಮಗ ಹಾಗೂ ಸೊಸೆಯಾದ ಚಾಸಾ 1 ಹಾಗೂ 4 ರವರು 1 ನೇ ಆರೋಪಿ ಹಾಗೂ ಅವರ ಕುಟುಂಬದವರಿಂದ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಆದ ನಂತರ ಸದರಿ ಕ್ರಯಕ್ಕೆ ಪಡೆದ ಜಮೀನಿಗೆ ಸಂಬಂಧಿಸಿದಂತೆ ಊರಿನಲ್ಲಿ ಪಂಚಾಯಿತಿ ನಡೆದಿರುತ್ತದೆ ಎಂದರೆ ಸರಿ. ಪಂಚಾಯಿತಿಯಲ್ಲಿ ತೀರ್ಮಾನವಾಗಿ ಕ್ರಯಕ್ಕೆ ಪಡೆದ ಜಮೀನಿನ ಪೈಕಿ 1 ಎಕರೆ 10 ಗುಂಟೆ ಜಮೀನನ್ನು 1 ನೇ ಆರೋಪಿಯ ಹೆಂಡತಿಯ ಹೆಸರಿಗೆ ವಾಪಸ್ಸು ಬರೆದುಕೊಟ್ಟಿರುತ್ತೇವೆ ಎಂದರೆ ಸರಿ.ನಾವು 1 ನೇ ಆರೋಪಿ ಹಾಗೂ ಅವರ ಕುಟುಂಬದವರಿಂದ ಮೋಸ ಮಾಡಿ ಕ್ರಯಪತ್ರ ಬರೆಸಿಕೊಂಡಿರುವುದಾಗಿ ತೀರ್ಮಾನವಾಗಿ ನಂತರ 1 ಎಕರೆ 10 ಗುಂಟೆ ಜಮೀನನ್ನು ವಾಪಸ್ಸು ನೀಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ 1 ನೇ ಆರೋಪಿಯ ಹೆಂಡತಿಯ ಹೆಸರಿಗೆ ವಾಪಸ್ಸು ಬರೆದುಕೊಟ್ಟ 1 ಎಕರೆ 10 ಗುಂಟೆ ಜಮೀನಿಗೆ ಯಾವುದೇ ತಂತಿ ಬೇಲಿ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಹಾಕಿದ್ದ ತಂತಿ ಬೇಲಿಯನ್ನು ಆರೋಪಿಗಳು ಮುರಿದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 1 ಎಕರೆ 10 ಗುಂಟೆ ಜಮೀನಿಗೆ ಸಂದಬಂಧಿಸಿದಂತೆ 4 ನೇ ಆರೋಪಿ ಅಳತೆ ಮಾಡಿಸಿದ್ದು ಸದರಿ ಅಳತೆಯ ಪ್ರಕಾರ ನಾವು 6 ಗುಂಟೆ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದಾಗಿ ವರದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾವು ಮೇಲೆ ಹೇಳಿದಂತೆ 6 ಗುಂಟೆ ಜಮೀನನ್ನ ಒತ್ತುವರಿ ಮಾಡಿಕೊಂಡ ನಂತರ 4 ನೇ ಆರೋಪಿ ನನ್ನ ಹಾಗೂ ನನ್ನ ಹೆಂಡತಿ ವಿರುದ್ಧ ಒತ್ತುವರಿ ಬಿಡಿಸುವ ಸಂಬಂಧ ಹಾಗೂ ತಿರುಗಾಡುವ ದಾರಿಯ ಸಂಬಂಧ ಅಸಲು ದಾವಾ 135/2026 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 6

ಗುಂಟೆ ಜಮೀನನ್ನು ಕಬಳಿಸುವ ಉದ್ದೇಶದಿಂದ ನನ್ನ ಮಗ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಸಂಪೂರ್ಣ ಜಮೀನಿನ ಸುತ್ತಲೂ ತಂತಿ ಬೇಲಿ ಹಾಕಿಸಿಕೊಂಡು ಅದಕ್ಕೆ ಸಿಸಿ ಕ್ಯಾಮೆರಾ ಸಹ ಅಳವಡಿಸಿರುತ್ತೇವೆ ಎಂದರೆ ಸರಿ. ಸದರಿ ಒತ್ತುವರಿಯಾದ ಜಾಗದಲ್ಲಿ ಯಾವುದೇ ಬೇಲಿ ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಬೇಲಿ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಒತ್ತುವರಿಯಾದ 6 ಗುಂಟೆ ಜಮೀನನ್ನು ಬಿಟ್ಟು ಬೇಲಿ ಹಾಕಿಕೊಳ್ಳುವಂತೆ ಆರೋಪಿಗಳು ತಿಳಿಸಿದ್ದರೂ ಸಹ ನಾವು ಅದನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ದಿನಾಂಕ ತಿಂಗಳು ಹಾಗೂ ವರ್ಷದಲ್ಲಿ ಘಟನೆ ನಡೆಯಿತು ಎಂದು ನನಗೆ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಘಟನೆ ಸಮಯದಲ್ಲಿ ನಾನು, ಚಾಸಾ 3 ಹಾಗೂ ಆರೋಪಿಗಳು ಇದ್ದಿರುತ್ತೇವೆ. ಆ ಸಮಯದಲ್ಲಿ ಯಾವುದೇ ಗ್ರಾಮಸ್ಥರು ಇದ್ದಿರಲಿಲ್ಲ. ಘಟನೆ ಮಧ್ಯಾಹ್ನ ಸುಮಾರು 12.00 ಗಂಟೆಗೆ ನಡೆದಿರುತ್ತದೆ. ಸದರಿ ನಮ್ಮ ಜಮೀನು ಊರಿನ ಪಕ್ಕಕ್ಕೆ ಇರುತ್ತದೆ ಎಂದರೆ ಸರಿ.  ಸಾಮಾನ್ಯವಾಗಿ ಅಲ್ಲಿ ಗಲಾಟೆಯಾದರೆ ಅಕ್ಕಪಕ್ಕದ ಜನರು ಬರುತ್ತಾರೆ ಎಂದರೆ ಸಾಕ್ಷಿಯು ಯಾರೂ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನಮ್ಮ ತೋಟದ ಮನೆಗೂ ಹಾಗೂ ಸದರಿ ಘಟನೆ ನಡೆಯಲಾಯಿತು ಎಂದು ಹೇಳಲಾದ ಸ್ಥಳಕ್ಕೂ ಸುಮಾರು ½ ಕಿ ಮೀ ಅಂತರ ಇರುತ್ತದೆ ಎಂದರೆ ಸರಿ. ನಾವು ಗಲಾಟೆ ಮೊದಲು ಮನೆಯಲ್ಲಿ ಇದ್ದಿರುತ್ತೇವೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಯಾವುದೇ ತಂತಿ ಬೇಲಿ ಹಾಗೂ ಕಲ್ಲು ಕಂಬವನ್ನು ಮುರಿದಿರುವುದಿಲ್ಲ ಹಾಗೂ ನನೊಂದಿಗೆ ಹಾಗೂ ಚಾಸಾ 3 ರವರೊಂದಿಗೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಚಾಸಾ 1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ:</u>** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**